## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಶ್ರೀ ಡಿ.ಆರ್.ಪರಮೇಶ್ವರಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ (ಹಾಲಿ ನಿವೃತ್ತ) ಇವರ ವಿರುದ್ಧ ಇಲಾಖಾ ವಿಚಾರಣೆ, ಆರೋಪಗಳಿಂದ ಕೈಬಿಡುವ ಬಗ್ಗೆ ಆದೇಶ.

*ಓದಲಾಗಿದೆ:*

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಪತ್ರ ಸಂಖ್ಯೆ:ಜಿಪಂಬ/ಸಿಬ್ಬಂದಿ(4)ಸಿಸಿಎ/10/2015-16/1603, ದಿ:03.03.2016.
2. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 440 ಜಿಪಅ 1.3, ದಿ:12.04.016.
3. ಶ್ರೀ ಡಿ.ಆರ್.ಪರಮೇಶ್ವರಪ್ಪ, ಕಾರ್ಯಪಾಲಕ ಇಂಜಿನಿಯರ್ ಇವರ ವಿವರಣೆ ದಿನಾಂಕ:15.05.2016
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 465 ಜಿಪಅ 2018, ದಿನಾಂಕ:14.03.2019
5. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 465 ಜಿಪಅ 2018, ದಿನಾಂಕ:24.05.2019
6. ವಿಚಾರಣಾಧಿಕಾರಿಗಳ ವರದಿ ದಿನಾಂಕ:24.12.2019

### ಪ್ರಸ್ತಾವನೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ರವರು ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಎರಡನೇ ವರದಿ (2011-13) ರಲ್ಲಿನ ಉಪ ಕಂಡಿಕೆ ಸಂಖ್ಯೆ:2.3.13.1 ಮತ್ತು 2.3.13.2 ರಲ್ಲಿನ ಶಿಫಾರಸ್ಸನ್ನು ಅನುಸರಿಸಿ ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:03.3.2016 ರ ಪತ್ರದೊಂದಿಗೆ 2003 ರಿಂದ 2008 ರ ಅವಧಿಯಲ್ಲಿ ಬಳ್ಳಾರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ನೀರು ಸರಬರಾಜು ಯೋಜನೆಯ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಹಾಗೂ ವಿಳಂಬ ದೋರಣೆಯಿಂದಾಗಿ ಯೋಜನೆಗಳಿಗೆ ಲಭ್ಯವಿದ್ದ ಪೂರ್ಣ ಹಣವನ್ನು ಬಳಸಿಕೊಳ್ಳಲು ವಿಫಲರಾಗಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಶ್ರೀ ಡಿ.ಟಿ.ಹನುಮಂತಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ ಮತ್ತು ಶ್ರೀ ಡಿ.ಆರ್.ಪರಮೇಶ್ವರಪ್ಪ ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ ಇವರುಗಳ ವಿರುದ್ದ ಆರೋಪ ಪಟ್ಟಿಯನ್ನು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸಿದ್ದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಆರೋಪಿತರ ಪೈಕಿ ಶ್ರೀ ಡಿ.ಟಿ.ಹನುಮಂತಪ್ಪ ಇವರು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು ಪ್ರಕರಣ ನಡೆದ ದಿನಾಂಕಕ್ಕೆ ತಾಳೆ ಮಾಡಲಾಗಿ ಅವರ ವಿರುದ್ದ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 214 ರ ಉಪಬಂಧಗಳ ಅನುಸಾರ ಇಲಾಖಾ ವಿಚಾರಣೆ ಜರುಗಿಸಲು ಅವಕಾಶ ಇಲ್ಲದಿರುವುದನ್ನು ಗಮನಿಸಿ ಅವರ ವಿರುದ್ದ ಮುಂದಿನ ಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಉಳಿದಂತೆ, ಶ್ರೀ ಡಿ.ಆರ್.ಪರಮೇಶ್ವರಪ್ಪ ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಇವರು ಸೇವೆಯಲ್ಲಿ ಇದ್ದುದ್ದರಿಂದ ಸದರಿಯವರ ವಿರುದ್ದದ ಆರೋಪಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:12.4.2016 ರಲ್ಲಿ ಕಾರಣ ಕೇಳುವ ನೋಟಿಸ್‌ನೊಂದಿಗೆ ಆರೋಪ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಆರೋಪಗಳಿಗೆ ಪ್ರತಿಯಾಗಿ ಶ್ರೀ ಡಿ.ಆರ್.ಪರಮೇಶ್ವರಪ್ಪ ಇವರು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:15.05.2016 ರಂದು ವಿವರಣೆ ಸಲ್ಲಿಸಿ ಅವರ ವಿರುದ್ಧದ ಆರೋಪಗಳನ್ನು ನಿರಾಕರಿಸಿ ತಮ್ಮನ್ನು ಆರೋಪ ಮುಕ್ತಗೊಳಿಸುವಂತೆ ಕೋರಿದ್ದರು. ಶ್ರೀ ಡಿ.ಆರ್.ಪರಮೇಶ್ವರಪ್ಪ ಇವರು ಆರೋಪಗಳನ್ನು ನಿರಾಕರಿಸಿದ್ದರಿಂದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ರಡಿ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾದೀಶರಾದ ಶ್ರೀ ಬಸವರಾಜ ತಡಹಾಳ್, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ ಶ್ರೀ ಬಸವರಾಜ ತಡಹಾಳ್ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮಾಡಿದ ಆದೇಶವನ್ನು ರದ್ದುಪಡಿಸಿ ಶ್ರೀ ಜೆ.ಎಸ್.ಸೋಮಶೇಖರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಅದರಂತೆ ವಿಚಾರಣಾಧಿಕಾರಿಗಳು ಆಪಾದಿತರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ನಡೆಸಿ ಮೇಲೆ ಓದಲಾದ ಕ್ರಮಾಂಕ(6) ರ ದಿನಾಂಕ:24.12.2019 ರಂದು ಸರ್ಕಾರಕ್ಕೆ ವಿಚಾರಣಾ ವರದಿ ಸಲ್ಲಿಸಿದ್ದು ಆರೋಪಿತರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದಿಲ್ಲವೆಂಬ ನಿರ್ಣಯಕ್ಕೆ ಬಂದಿರುತ್ತಾರೆ.

ಶ್ರೀ ಡಿ.ಆರ್.ಪರಮೇಶ್ವರಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಇವರ ವಿರುದ್ಧದ ಆರೋಪಗಳು, ವಿಚಾರಣಾಧಿಕಾರಿಗಳು ಆರೋಪಗಳು ಸಾಭೀತಾಗದೆ ಇರುವುದಕ್ಕೆ ನೀಡಿರುವ ಕಾರಣಗಳು, ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪ್ರಸಕ್ತ ಪ್ರಕರಣದಲ್ಲಿ ಶ್ರೀ ಡಿ.ಆರ್.ಪರಮೇಶ್ವರಪ್ಪ, ಕಾರ್ಯಪಾಲಕ ಇಂಜಿನಿಯರ್ ಇವರು ಪಂ.ರಾ.ಇಂ ವಿಭಾಗ, ಹಡಗಲಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಅವರ ವಿರುದ್ಧ ಎರಡು ಆರೋಪಗಳನ್ನು ಮಾಡಿದ್ದು, ಆರೋಪಗಳ ಸಂಕ್ಷಿಪ್ತ ವಿವರಗಳೆಂದರೆ

1) **ಶ್ರೀ.ಡಿ.ಆರ್.ಪರಮೇಶ್ವರಪ್ಪ, ಇವರು ಈ ಹಿಂದೆ ಕಾ.ಇಂ ಆಗಿ ಪಂ.ರಾಜ್.ಇಂ.ವಿಭಾಗ ಹಡಗಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಬಳ್ಳಾರಿ ಜಿಲ್ಲಾ ಪಂಚಾಯತಿಗೆ ಕುಡಿಯುವ ನೀರು ಯೋಜನೆಗಾಗಿ ARWSP ಮತ್ತು MNP ಎರಡು ಸೇರಿ ಒಟ್ಟಾರೆಯಾಗಿ ರೂ.92.66 ಕೋಟಿ ಬಿಡುಗಡೆ ಮಾಡಲಾಗಿದ್ದರೂ ಸಹ ಸದರಿ ಮೊತ್ತಕ್ಕೆ ಅನುಗುಣವಾಗಿ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸುವಲ್ಲಿ/ ಸರ್ಕಾರಕ್ಕೆ ಸಲ್ಲಿಸುವಲ್ಲಿ ನಿರಾಸಕ್ತಿ ತೋರಿದ್ದರಿಂದ ಸರ್ಕಾರವು ನಿಗಧಿಪಡಿಸಿದ ಮೊತ್ತವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಅಲ್ಲದೆ ಕ್ರಿಯಾ ಯೋಜನೆಗಳನ್ನು ತಯಾರಿಸುವಲ್ಲಿ 7 ರಿಂದ 9 ತಿಂಗಳಗಳಷ್ಟು ವಿಳಂಬ, ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸುವಲ್ಲಿ ಇವರು ತೋರಿದ ನಿರ್ಲಕ್ಷ್ಯ ಹಾಗೂ ವಿಳಂಬ ಧೋರಣೆಯಿಂದಾಗಿ ಯೋಜನೆಗಳಿಗೆ ಲಭ್ಯವಿದ್ದ ಪೂರ್ಣ ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗದೆ ಸಾರ್ವಜನಿಕ ಉದ್ದೇಶದ ಯೋಜನೆಗಳು ಪೂರ್ಣವಾಗಿ ಕಾರ್ಯಗತಗೊಳ್ಳದಿರುವಲ್ಲಿ ಪರಿಣಮಿಸಿದ್ದು ಈ ಲೋಪಕ್ಕೆ ಇವರು ಕಾರಣರಾಗಿರುತ್ತಾರೆ.**
2) **2009-10 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿನ 1014 ಗ್ರಾಮಗಳ ಪೈಕಿ 487 ಗ್ರಾಮಗಳ ಅಂತರ್ಜಲವು ರಾಸಾಯನಿಯುಕ್ತವೆಂದು ಗುರುತಿಲಾಗಿದ್ದಾಗ್ಯೂ ಸಹ, ಸರಿಯಾದ ಯೋಜನೆಯನ್ನು ಅಳವಡಿಸಿಕೊಳ್ಳದೆ ಹಡಗಲಿ ಪಂ.ರಾ.ಇಂ.ವಿಭಾಗ ವಿಭಾಗದ 274 ಗ್ರಾಮಗಳ ಪೈಕಿ ಕೇವಲ 38 ಗ್ರಾಮಗಳಿಗೆ ಮಾತ್ರ ಸುರಕ್ಷಿತ ಕುಡಿಯುವ ನೀರು ಒದಗಿಸಿ, ಉಳಿದ 236 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ಕ್ರಮವನ್ನು ಜರುಗಿಸದೆ ಆ ಗ್ರಾಮಗಳ ಜನತೆಗೆ ಶುದ್ಧ ಕುಡಿಯುವ ನೀರಿನಿಂದ ವಂಚಿತರಾಗಲು ಕಾರಣರಾಗಿರುತ್ತಾರೆ.**

ಮೇಲ್ಕಂಡ ಆರೋಪಗಳ ಪೈಕಿ ಆರೋಪ-1 ಕ್ಕೆ ಸಂಬಂಧಿಸಿದಂತೆ, ವಿಚಾರಣಾಧಿಕಾರಿಗಳು ಶ್ರೀ ಪ್ರಭು, ಕಾ.ಇಂ ಮತ್ತು ಶ್ರೀ ಜಾನಕಿರಾಮ, ಯೋಜನ ನಿರ್ದೇಶಕರು, ಜಿ.ಪಂ, ಬಳ್ಳಾರಿ ಇವರಿಂದ ಸಾಕ್ಷಿ ಹೇಳಿಕೆ ಪಡೆದಿದ್ದು, ಆಪಾದಿತರು ತಿಳಿಸಿರುವಂತೆ ಅವರು ಪಂ.ರಾ.ಇಂ ವಿಭಾಗ, ಹಡಗಲಿ ಇಲ್ಲಿ ದಿನಾಂಕ:02.06.2007 ರಿಂದ 23.08.2008 ರವರಗೆ 14 ತಿಂಗಳು ಕಾರ್ಯನಿರ್ವಹಿಸಿದ್ದು, ಅವರ ಹಿಂದಿನ ಕಾ.ಇಂ ರವರು 2003 ರಿಂದ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ತಯಾರು ಮಾಡಬೇಕಿದ್ದು, ಅವರು ತಯಾರು ಮಾಡಿರುವುದಿಲ್ಲ, ಆಪಾದಿತರು ತಮ್ಮ 14 ತಿಂಗಳ ಅವಧಿಯಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆ ಪಡೆದಿರುವುದಾಗಿ ತೆಗೆದು ಕೊಂಡಿರುವ ನಿಲುವನ್ನು ಸಾಕ್ಷಿಗಳು ಪಾಟೀಲ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆಂದು ತಿಳಿಸಿ ಒಂದನೇ ಆರೋಪವು ರುಜುವಾತಾಗಿರುವುದಿಲ್ಲವೆಂದು ಅಭಿಪ್ರಾಯಕ್ಕೆ ಬಂದಿರುತ್ತಾರೆ.

2 ನೇ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ಮಂಡಿಸಿದ ನಿಶಾನೆ ಪಿ–1&2 ರ ದಾಖಲೆಯನ್ನು ಪರಿಗಣಿಸಿದ್ದು, ನಿಶಾನೆ ಪಿ–1 ಆರ್.ಡಬ್ಲ್ಯೂ.ಎಸ್.ಎಸ್ ರವರು ತಯಾರು ಮಾಡಿದ ಗ್ರಾಮದ ಪಟ್ಟಿಯಾಗಿದ್ದು, ನಿಶಾನೆ ಪಿ–2 ವಿಧಾನ ಮಂಡಳದ ಸಮಿತಿಯ 2011-13 ರ ವರದಿಯಾಗಿರುತ್ತದೆಯೆಂದು, ಆಪಾದಿತರ ಅಧಿಕಾರದ ಅವಧಿಯು ದಿನಾಂಕ:02.06.2007 ರಿಂದ 23.08.2008 ರವರಗೆ ಆಗಿದ್ದು, ಆ ಅವಧಿಯಲ್ಲಿ ಕ್ರಿಯಾ ಯೋಜನೆ ಪಟ್ಟಿಯಲ್ಲಿ ನಿಶಾನೆ ಪಿ–1 ರ ದಾಖಲೆಗಳನ್ನು ಸೇರಿಸಲಾಗಿತ್ತೆಂದು, ನಿಶಾನೆ ಪಿ–1 ರಲ್ಲಿ ಕಂಡು ಬರುವ ಗ್ರಾಮಗಳ ಪೈಕಿ ಕೆಲವು ಗ್ರಾಮಗಳ ಅಂತರ್ಜಲವು ರಾಸಾಯನಿಕಯುಕ್ತವಾದ ಗ್ರಾಮಗಳು ಎಂದು ಭಾವಿಸಿದ್ದಾಗ್ಯೂ, ಅಪಾದಿತ ನೌಕರರು ತಯಾರು ಮಾಡಿದ ಕ್ರಿಯಾಯೋಜನೆ ಮತ್ತು ಅನುಮೋದನೆ ಪಡೆಯುವ ಗ್ರಾಮಗಳು ಈ ಪಟ್ಟಿಯಲ್ಲಿರುವ ಗ್ರಾಮಗಳು ಒಂದೇ ಎಂಬ ಬಗ್ಗೆ ಮಂಡನಾಧಿಕಾರಿಯಾಗಲಿ ಶಿಸ್ತು ಪ್ರಾಧಿಕಾರವಾಗಲಿ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲವೆಂದು ತಿಳಿಸಿ, ಈ ಆರೋಪವು ರುಜುವಾತಾಗಿರುವುದಿಲ್ಲವೆಂಬ ನಿರ್ಣಯದೊಂದಿಗೆ ವರದಿ ಸಲ್ಲಿಸಿರುತ್ತಾರೆ.

ಶ್ರೀ ಡಿ.ಆರ್.ಪರಮೇಶ್ವರಪ್ಪ, ಕಾ.ಇಂ ರವರ ಮೇಲಿನ ಆರೋಪವೆಂದರೆ ಇದ್ದ ಅನುದಾನವನ್ನು ಬಳಸದೇ ಕರ್ತವ್ಯಲೋಪವೆಸಗಿರುತ್ತಾರೆಂಬ ಬಗ್ಗೆ ಇರುತ್ತದೆ. ಪ್ರಕರಣ ನಡೆದ ಅವಧಿಯು 2003 ರಿಂದ 2009 ಆಗಿದ್ದು, ಸದರಿ ಅವಧಿಯಲ್ಲಿ ಆಪಾದಿತರು ಕೇವಲ 14 ತಿಂಗಳ ಮಾತ್ರ ಕಾರ್ಯನಿರ್ವಹಿಸಿದ್ದು, ಸದರಿ ಪ್ರಕರಣದಲ್ಲಿ ಯಾವುದೇ ಆರ್ಥಿಕ ನಷ್ಟದ ಆರೋಪಗಳು ಇರುವುದಿಲ್ಲ. ಅಲ್ಲದೇ ಸದರಿ ಅಧಿಕಾರಿಯು ದಿನಾಂಕ:31.05.2019 ರಂದು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಹಾಗೂ ಸದರಿಯವರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗದೇ ಇರುವುದರಿಂದ ವಿಚಾರಣಾ ವರದಿಯನ್ನು ಒಪ್ಪಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 465 ಜಿಪಅ 2018, ಬೆಂಗಳೂರು, ದಿನಾಂಕ:20.05.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಡಿ.ಆರ್.ಪರಮೇಶ್ವರಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ (ಹಾಲಿ ನಿವೃತ್ತ) ಇವರ ವಿರುದ್ಧದ ಆರೋಪಗಳ ಕುರಿತು ಶ್ರೀ ಜೆ.ಎಸ್.ಸೋಮಶೇಖರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ವಿಚಾರಣೆ ನಡೆಸಿ, ಸಲ್ಲಿಸಿರುವ ವರದಿಯನ್ನು ಸರ್ಕಾರವು ಅಂಗೀಕರಿಸಿ ಸದರಿಯವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈ ಬಿಡಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

20/05/2020
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ–(ನೋಂದಾಯಿತ ಅಂಚೆ ಮುಖಾಂತರ).
4. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
7. ಸಂಬಂಧಿಸಿದ ಅಧಿಕಾರಿಗೆ(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಮುಖಾಂತರ).

8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ & ಸಿ).
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
11. ಮೇಲ್ವಿಚಾರಕರು, ಗಣಕಯಂತ್ರ ಕೋಶ. ಗ್ರಾ.ಅ.ಪಂ.ರಾಜ್ ಇಲಾಖೆ.
12. ರಕ್ಷಾ ಕಡತ / ಹೆಚ್ಚುವರಿ ಪ್ರತಿ.